# ‘ನಟನೆಯೇ ವೃತ್ತಿ ಬದುಕಿನ ಮಾರ್ಗ’



## ಮಹತಿ ವೈಷ್ಣವಿ

**ಸ್ಟಾರ್ ಸುವರ್ಣದ ‘ಉಧೋ ಉಧೋ ಶ್ರೀ ರೇಣುಕಾ ಯಲ್ಲಮ್ಮ’ ಧಾರಾವಾಹಿಯಲ್ಲಿ ರೇಣುಕೆಯ ಪಾತ್ರಧಾರಿ**

◆ **ನಿಮ್ಮ ಪರಿಚಯ ಹೇಳಿ?**

ಈಗಷ್ಟೆ ಪಿಯುಸಿ ಮುಗಿಸಿದ್ದು, ಸಿಇಟಿ ಫಲಿತಾಂಶಕ್ಕೆ ಕಾಯುತ್ತಿದ್ದೇನೆ. ಅಭಿನಯದ ಜೊತೆಗೆ ಓದಬೇಕು ಎನ್ನುವ ನಿರ್ಧಾರ ಮಾಡಿದ್ದೆ. ಚಿತ್ರೀಕರಣದ ಬಿಡುವಿನ ವೇಳೆ ಗೆಳೆಯರ ಜೊತೆ ತರಗತಿ ಮತ್ತು ಪಠ್ಯಕ್ಕೆ ಸಂಬಂಧಿಸಿದಂತೆ ಚರ್ಚಿಸುತ್ತಿದ್ದೆ. ಸಮಯ ಸಿಕ್ಕಾಗೆಲ್ಲ ಓದುತ್ತಿದ್ದೆ. ನನ್ನ 10ನೇ ವರ್ಷದಿಂದಲೇ ನಟನೆಯನ್ನು ಆರಂಭಿಸಿದ್ದರಿಂದ ಇದೆಲ್ಲ ಅಭ್ಯಾಸ ಆಗಿದೆ. 5ನೇ ತರಗತಿ ಇದ್ದಾಗ ‘ಡ್ರಾಮಾ ಜೂನಿಯರ್ಸ್’ ರಿಯಾಲಿಟಿ ಶೋ ಸ್ಪರ್ಧೆಯಲ್ಲಿ ಫೈನಲ್‌ವರೆಗೆ ಪೈಪೋಟಿ ನೀಡಿದ್ದೆ. ಸಿನಿಮಾ ಕೂಡ ಮಾಡಿದ್ದೇನೆ. ನಮ್ಮ ‘ಎಳೆಯರು ನಾವು ಗೆಳೆಯರು’ ಸಿನಿಮಾಕ್ಕೆ ‘ಉತ್ತಮ ಮಕ್ಕಳ ಚಿತ್ರ’ ಎಂಬ ರಾಜ್ಯ ಪ್ರಶಸ್ತಿ ಕೂಡ ಬಂದಿದೆ. ಓದಿನಲ್ಲೂ ನಾನೇನೂ ಹಿಂದೆ ಇಲ್ಲ. ಪಿಯುಸಿಯಲ್ಲಿ 96.6 ಅಂಕ ಪಡೆದು ಪಾಸಾಗಿದ್ದೇನೆ.

◆ **ಸಾಮಾಜಿಕ ಪಾತ್ರಗಳನ್ನು ಮಾಡಿದ್ದ ನಿಮಗೆ ಪೌರಾಣಿಕ ಪಾತ್ರ ಹೇಗೆನಿಸಿದೆ?**

ಯಾವತ್ತೂ ನಾನು ಪೌರಾಣಿಕ ಪಾತ್ರವನ್ನು ಮಾಡಿರಲಿಲ್ಲ. ಈ ಮೊದಲು ‘ಗಟ್ಟಿಮೇಳ’ದಲ್ಲಿ ಅಂಜಲಿ ಪಾತ್ರವನ್ನು ನಿರ್ವಹಿಸಿದ್ದೆ. ಅದರಿಂದ ಒಳ್ಳೆಯ ಜನಪ್ರಿಯತೆ ಸಿಕ್ಕಿತ್ತು. ಭಿನ್ನ ಪಾತ್ರಗಳನ್ನು ಮಾಡುವ ಯೋಚನೆಯಲ್ಲಿ ಇದ್ದೆ. ಹೀಗಿರುವಾಗ ರೇಣುಕೆ ಪಾತ್ರಕ್ಕೆ ನನ್ನನ್ನು ಆಯ್ಕೆ ಮಾಡಿದ್ದಾರೆ ಎಂದು ತಿಳಿದು ಖುಷಿ ಆಯಿತು. ದೇವತೆ ಪಾತ್ರ ಮಾಡುವುದು ಸುಲಭ ಅಲ್ಲ. ಇದು ತುಂಬ ಸವಾಲಿನಿಂದ ಕೂಡಿದೆ. ನನ್ನ ವೃತ್ತಿ ಬದುಕಿನ ಯಾನದಲ್ಲಿ ಪ್ರಧಾನ ಪಾತ್ರ ಅದರಲ್ಲೂ ದೇವಿಯಾಗಿ ಕಾಣಿಸಿಕೊಳ್ಳುತ್ತಿದ್ದೇನೆ ಎಂದು ತಕ್ಷಣ ಒಪ್ಪಿದೆ. ಇದಕ್ಕೆ ಅಪ್ಪ–ಅಮ್ಮ ಕೂಡ ಸ್ಫೂರ್ತಿ ತುಂಬಿ ಹುರಿದುಂಬಿಸಿದ್ದಾರೆ. ಪೌರಾಣಿಕ ಕಥೆಯಲ್ಲಿ ಕಲಿಯಲು ತುಂಬ ಅವಕಾಶ ಇರುತ್ತದೆ. ರೇಣುಕೆ ಅಂದರೆ ಯುವರಾಣಿ. ಆ ಪಾತ್ರವಾಗಿ ಏನೆಲ್ಲ ಕಲಿಯಬೇಕೋ ಅದೆಲ್ಲ ಕಲಿಯುತ್ತಿದ್ದೇನೆ. ಪಾತ್ರಕ್ಕಾಗಿ ಕುದುರೆ ಸವಾರಿ, ಬಿಲ್ವಿದ್ಯೆ, ಕತ್ತಿ ವರಸೆ ಅಭ್ಯಾಸ ಮಾಡಿದ್ದೇನೆ. ಇಲ್ಲದಿದ್ದರೆ ಅದನ್ನು ಕಲಿಯಲು ಸಾಧ್ಯವೇ ಇರಲಿಲ್ಲ. ರೇಣುಕೆ ವಿದ್ಯಾವಂತೆ, ಆಕೆ ಹಲವು ಭಾವಗಳ ಸಂಗಮ. ಮುಗ್ಧೆ, ತುಂಬ ಧೈರ್ಯವಂತೆ, ಎಂತಹ ಸಂಕಷ್ಟದ ಸಂದರ್ಭವನ್ನೂ ನಿಭಾಯಿಸುತ್ತಾಳೆ. ಅಷ್ಟೇ ಕಾಳಜಿ, ಸಹನೆ, ಕರುಣೆ, ಸಿಟ್ಟು, ಪ್ರೀತಿಯ ಹೃದಯವಂತೆ. ಒಂದೊಂದು ದೃಶ್ಯದಲ್ಲೂ ಭಿನ್ನ ಆಯಾಮದ ಭಾವನೆಗಳನ್ನು ಪ್ರಕಟಿಸುತ್ತಾಳೆ. ಇದುವರೆಗೂ ವಾಸ್ತವ ಪಾತ್ರಗಳ ಜೊತೆ ನಟಿಸಿದ್ದೆ. ಇಲ್ಲಿ ಕಲ್ಪನೆಯ ಜೊತೆ ಅಭಿನಯಿಸಬೇಕು. ಹಳೆಗನ್ನಡವನ್ನು ಮಾತನಾಡುವ ಅವಕಾಶವೂ ಇಲ್ಲಿದೆ. ಸಂಕೀರ್ಣ ಪಾತ್ರವಾದರೂ ಮಾಡುವುದು ಇಷ್ಟವಾಗುತ್ತಿದೆ.

◆ **ಓದಿನ ನಂತರ ನಿಮ್ಮ ಒಲವು ಬದಲಾಗಬಹುದೇ?**

ನನ್ನ ಪ್ಯಾಷನ್ ಆ್ಯಕ್ಟಿಂಗ್. ಇದೇ ನನ್ನ ವೃತ್ತಿ ಬದುಕಿನ ಮಾರ್ಗ ಆಗುತ್ತದೆ. ಆದರೆ, ಶಿಕ್ಷಣವೇ ಎಲ್ಲದಕ್ಕೂ ಮೂಲ. ಹಾಗಾಗಿ ಅದನ್ನು ಬಿಡಲು ಆಗುವುದಿಲ್ಲ. ಎಂಜಿನಿಯರಿಂಗ್ ಆದರೆ ನಟನೆ ಜೊತೆ ಓದನ್ನೂ ನಿರ್ವಹಿಸಬಹುದು. ಮೆಡಿಕಲ್ ಆದರೆ ಅದು ಸಾಧ್ಯ ಇಲ್ಲ. ಒಂದು ವೇಳೆ ಎಂಜಿನಿಯರಿಂಗ್ ಆಗದಿದ್ದರೆ ಬಿ.ಎಸ್‌ಸಿ ಮಾಡುವೆ. ಚಿಕ್ಕ ವಯಸ್ಸಿನಿಂದಲೂ ವಿಜ್ಞಾನವೇ ಇಷ್ಟ ಇರುವುದರಿಂದ ಇದರಲ್ಲೇ ಪದವಿಯನ್ನು ತೆಗೆದುಕೊಳ್ಳಬೇಕು ಎನ್ನುವ ಆಸೆಯಿದೆ. ಇನ್ನೂ ಸಿಇಟಿ ಫಲಿತಾಂಶ ಬಂದಿಲ್ಲ. ಅದು ಬಂದ ಮೇಲೆ ಮುಂದಿನ ಯೋಚನೆ ಮಾಡುತ್ತೇನೆ. ಸದ್ಯ ಸೀರಿಯಲ್ ಮೇಲೆ ಫೋಕಸ್ ಮಾಡಿದ್ದೇನೆ.

◆ **ಮಾಧ್ಯಮದಲ್ಲಿನ ತಾಂತ್ರಿಕ ಕೆಲಸದ ಬಗ್ಗೆ ನಿಮ್ಮ ನಿಲುವು ಏನು?**

ತೆರೆಯ ಹಿಂದೆ ಕೆಲಸ ಮಾಡಬೇಕು ಎನ್ನುವ ಕುತೂಹಲವೂ ಇದೆ. ಒಂದು ಕಾರ್ಯಕ್ರಮವನ್ನು ಸಂಪೂರ್ಣ ನಿರ್ವಹಿಸಬೇಕು. ಸದ್ಯ ತೆರೆಯ ಮೇಲೆ ಕಾಣಿಸಿಕೊಳ್ಳುವುದು ತುಂಬ ಇಷ್ಟ. ತೆರೆಯ ಹಿಂದೆ ಬಂದರೆ ನಿರ್ಮಾಣ ಕ್ಷೇತ್ರದಲ್ಲಿಯೇ ಕೆಲಸ ಮಾಡುತ್ತೇನೆ. ಇನ್ನೂ ಈ ಬಗ್ಗೆ ಯೋಚಿಸಿಲ್ಲ. ಸದ್ಯ ನನಗೆ ನಟನೆಯೊಂದೇ ಅಂತಿಮ ಗುರಿ. ಪ್ರತಿ ಕೆಲಸವೂ ಭಿನ್ನವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕೆಲಸವನ್ನು ಕಲಿಯುವ ಆಸಕ್ತಿಯಿದೆ. ನಟನೆಯನ್ನು ಮಾಡುತ್ತಲೇ ಬೇರೆ ಬೇರೆ ಕೆಲಸಗಳನ್ನು ಕಲಿಯಬೇಕು. ಅದೆಲ್ಲವನ್ನೂ ಕಲಿಯಲು ಇಲ್ಲಿ ಸಾಧ್ಯ ಇದೆ.

■ **ರಾಘವೇಂದ್ರ ಕೆ.**